**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1393/2019**

ಸಾಕ್ಷಿಯ ಹೆಸರುಃ ಉಮೇಶ ಎನ್ ಬಿ
ತಂದೆ /ಗಂಡನ ಹೆಸರು ಃ ಪೌತಿ ಬಸಪ್ಪ
ವಯಸ್ಸು ಃ 58
ಉದ್ಯೋಗ ಃ ಮಾಜಿ ಸೈನಿಕ
ವಾಸ ಸ್ಥಳ ಃ ಕೂಡಿಗೆ ಗ್ರಾಮ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 24.06.2025**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಹೆಚ್ ಇ ಪಿ ವಕೀಲರಿಂದ**

ಹೆಬ್ಬಾಲೆ ಗ್ರಾಮದ ಕಲಾವತಿ ಮತ್ತು ಪ್ರಕಾಶ ರವರ ಪರಿಚಯ ಇರುತ್ತದೆ. ಹೆಬ್ಬಾಲೆ ಗ್ರಾಮದಲ್ಲಿ ರೂ 1 ಲಕ್ಷ ಚೀಟಿಯನ್ನು 2011 ನೆ ಇಸ್ವಿಯಲ್ಲಿ ಕಲಾವತಿ ರವರು ಪ್ರಾರಂಭ ಮಾಡಿರುತ್ತಾರೆ . ಅದರಲ್ಲಿ ಚಂದ್ರಶೇಖರ ಭೋಗಿ , ಪ್ರಕಾಶ ಹೆಚ್ ಹೆಚ್ , ಶ್ರೀಮತಿ ಕುಮಾರಿ , ಚಂದ್ರಿಕಾ , ಸಿದ್ದಪ್ಪ , ಅಶ್ವತ , ಮತ್ತು ನಾನು ಸಹ ಸದಸ್ಯರಾಗಿ ಒಟ್ಟು 20 ಸದಸ್ಯ ಇರುತ್ತಾರೆ . ಅದರಲ್ಲಿ ನಾನು 8 ನೇ ಚೀಟಿಯನ್ನು ಕೂಗಿಕೊಂಡಿರುತ್ತೇನೆ . ಹಣಕ್ಕೆ ಖಾತ್ರಿಯಾಗಿ ಖಾಲಿ ಸಹಿ ಮಾಡಿದ ಚೆಕ್ ನ್ನ ನೀಡಿರುತ್ತೇನೆ . ಅದೆ ರೀತಿ ಎಲ್ಲಾರೂ ಸಹ ಖಾಲಿ ಚೆಕನ್ನು ನೀಡಿರುತ್ತಾರೆ. ಅದೆ ರೀತಿ ಚೆಕ್ ನ್ನು ಪಡೆದರು ಯಾವುದೆ ರೀತಿ ದುರುಪಯೋಗ ಮಾಡಿಕೊಳ್ಳುವ ಆಗಿಲ್ಲ . ಚೀಟಿ ಮುಗಿದ ನಂತರ ಖಾಲಿ ಚೆಕನ್ನು ವಾಪಸು ನೀಡಬೇಕಾಗುತ್ತದೆ . ಅದರಲ್ಲಿ ಭಾಗ್ಯ ಎಂಬುವವರು 5 ನೇ ಚೀಟಿಯನ್ನು ಕೂಗಿರುತ್ತಾರೆ . ಖಾತ್ರಿಗಾಗಿ ಅವರ ಬಳಿ ಯಾವುದೆ ಚೆಕ್ ಇಲ್ಲದ ಕಾರಣ ಆರೋಪಿಯು ಅವರಿಗೆ ಜಾಮೀನಾಗಿ ಒಂದು ಚೆಕ್ ನ್ನು ನೀಡಿರುತ್ತಾರೆ . ಭಾಗ್ಯ ರವರ ಗಂಡನಿಗೆ ಹುಷಾರಿಲ್ಲದ ಕಾರಣ ಕೆಲವೊಂದು ತಿಂಗಳು ಹಣ ಪಾವತಿಸಿರುವುದಿಲ್ಲ . ಅದು ಸುಮಾರು ರೂ 30 ಸಾವಿರಗಳು ಇರುತ್ತದೆ . ಕೊನೆಯಲ್ಲಿ ಚೀಟಿ ಮುಗಿದ ನಂತರ ಎಲ್ಲಾರಿಗೂ ಚೆಕ್ ವಾಪಸು ನೀಡಲಾಗಿರುತ್ತದೆ . ಆದರೆ ಆರೋಪಿಗೆ ಅವರು ಕೊಟ್ಟಿದ್ದ ಚೆಕ್ ನ್ನು ವಾಪಸು ನೀಡಿರುವುದಿಲ್ಲ. ಕಾರಣ ರೂ 30 ಸಾವಿರ ಹಣ ಕೊಡುವ ತನಕ

ಕೊಡಲಾಗುವುದಿಲ್ಲ ಎಂದು ತಿಳಿಸಿರುತ್ತಾರೆ . ತದನಂತರ ಭಾಗ್ಯ ರವರು ರೂ **30** ಸಾವಿರ ವನ್ನು ಕಲಾವತಿರವರಿಗೆ ಪಾವತಿಸಲು ಬಂದಾಗ ಅವರು ಸುಮಾರು ದುಬಾರಿ ಬಡ್ಡಿ ಸೇರಿಸಿ ರೂ ಒಂದೂವರೆ ಲಕ್ಷ ಕೊಡಬೇಕು ಎಂದು ತಿಳಿಸಿರುತ್ತಾರೆ. ಅದಕ್ಕೆ ಭಾಗ್ಯ ಎಂಬುವವರು ಒಪ್ಪಿರುವುದಿಲ್ಲ ಎಂದು ನನಗೆ ತಿಳಿದು ಬಂದಿರುತ್ತದೆ . ಪ್ರಜ್ವಲ್ ರವರು ನನಗೆ ಪರಿಚಯ ಇರುವುದಿಲ್ಲ. ಹಾಗೂ ಆರೋಪಿಗೂ ಅವರು ಪರಿಚಯ ಇರುವುದಿಲ್ಲ. ಕಲಾವತಿರವರು ಹಣದ ದುರ್ಬಳಕೆಗಾಗಿ ಸದರಿ ಚೆಕ್ ನ್ನು ಮಗನ ಹೆಸರಿಗೆ ಭರ್ತಿ ಮಾಡಿಸಿ ಸುಳ್ಳು ದಾಖಲೆ ಮಾಡಿರುತ್ತಾರೆ .

ಪಾಟಿ ಸವಾಲಿಗೆ ವಕೀಲರು ಸಮಯವಕಾಶ ಕೋರಿದ್ದರಿಂದ ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.